ಛತ್ರ ಖಾಲಿ ಇದೆ

ಶ್ರೀ ಪಿ.ಕೆ.ಮಿ. ಆಚಾರ್ಯ ಸಭಾ ಭವನ
ನಂ. ಸಿ.ಎ 19, ದಟ್ಟಗಳ್ಳಿ, 3ನೇ ಹಂತ, ಕನಕದಾಸನಗರ, ಮೈಸೂರು

ನೂತನವಾಗಿ ನಿರ್ಮಿಸಿರುವ ಕಲ್ಯಾಣ ಮಂಟಪ

ಅತ್ಯುತ್ತಮ ಸೌಕರ್ಯವುಳ್ಳ ಕಲ್ಯಾಣ ಮಂಟಪ 1000 ಜನ ಕೂರುವ ಉತ್ತಮ ಸುಧಾಗಣ, 600 ಜನ ಕೂರುವ ಡೈನಿಂಗ್ ಹಾಲ್, ರಿಸೆಪ್ಷನ್ ಗಾಗಿ ದೊಡ್ಡದಾದ ವೇದಿಕೆ, ಸುಂದರವಾದ ಮದುವೆ ಮಂಟಪ ಮತ್ತು 12 ರೂಂಗಳನ್ನು ಒಳಗೊಂಡ ಕಲ್ಯಾಣ ಮಂಟಪ ದೊರೆಯುತ್ತದೆ.

ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್
ತಿಂಗಳಿನಲ್ಲಿ ಕೆಲವೇ ದಿನಗಳು ಖಾಲಿ ಇವೆ

Ph: 0821- 2542099, M: 9880013585

ಲಂಕೇಶ

ದಿನಪತ್ರಿಕೆ

ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

ಸಂಪುಟ: ೪೬, ಸಂಚಿಕೆ: ೧೨, ರಾಷ್ಟ್ರೀಯ ಶಕ ೧೯೩೯ ಶಿಶಿರ: ಹುಣ್ಣಿಮೆ ೨೨, ● ಏಕಾದಶಿ– ವಿಶಾಖ, ಶುಕ್ರವಾರ, ಜ.೧೨, ೨೦೧೮, ದೂರವಾಣಿ: ೨೪೪೯೯೫೧೧, ೨೪೪೯೯೫೧೪, ೨೪೪೯೯೫೧೫, ಫ್ಯಾಕ್ಸ್: ೨೪೪೯೯೫೧೬, ಪುಟ : ೧೨+೪, ರೂ. ೩

ಮರಳು ಗಣಿಗಾರಿಕೆ ಪೂರ್ಣ ನಿಷೇಧ

- ರಾಜ್ಯದಲ್ಲಿಯೂ ತ.ನಾಡು, ಕೇರಳ ಮಾದರಿ ಕ್ರಮ
- ನದಿಯಿಂದ ಹಿಡಿ ಮರಳು ತೆಗೆಯಲೂ ಅವಕಾಶವಿಲ್ಲ
- ಸರ್ವೋಚ್ಚ ನ್ಯಾಯಾಲಯ ಆದೇಶ ಪಾಲನೆ: ಜಯಚಂದ್ರ

ಬೆಂಗಳೂರು,ಜ.೧೧– ತಮಿಳುನಾಡು ಮತ್ತು ಕೇರಳ ಮಾದರಿಯಲ್ಲಿ ರಾಜ್ಯದಲ್ಲಿಯೂ ಮರಳು ಗಣಿಗಾರಿಕೆಯನ್ನು ಪೂರ್ಣ ನಿಷೇಧಿಸಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಗಳ ಸಚಿವ ಟಿ.ಬಿ.ಜಯಚಂದ್ರ ಹೇಳಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಮರಳು ಗಣಿಗಾರಿಕೆ ನಿರ್ಬಂಧಿಸುವಂತೆ ಸರ್ವೋಚ್ಚ ನ್ಯಾಯಾಲಯವೇ ಆದೇಶಿಸಿದೆ. ಈ ಸೂಚನೆಯ ನಂತರ ತಮಿಳು ನಾಡು ಮತ್ತು ಕೇರಳದಲ್ಲಿ ೧ ಕೆಜಿ ಮರಳನ್ನೂ ನದಿಪಾತ್ರದಿಂದ ಎತ್ತಲು ಬಿಡುತ್ತಿಲ್ಲ. ಇದೇ ಮಾದರಿ ಯನ್ನು ನಮ್ಮ ರಾಜ್ಯದಲ್ಲಿಯೂ ಅನುಸರಿಸಲಾಗು ವುದು. ನದಿಪಾತ್ರದಿಂದ ೧ ಹಿಡಿ ಮರಳನ್ನೂ ತೆಗೆಯಲು ಅವಕಾಶವಾಗದಂತೆ ನೋಡಿಕೊಳ್ಳ ಲಾಗುವುದು. ಈ ಕುರಿತು ಸಂಬಂಧಿಸಿದವರಿಗೆ ಆದೇಶಿಸಲಾಗು ವುದು ಎಂದು ವಿವರಿಸಿದರು.

ಸರ್ವೋಚ್ಚ ನ್ಯಾಯಾಲಯದ ಆದೇಶ ನಮಗೂ ಅನ್ವಯವಾಗುತ್ತದೆ ಎಂದರು.

ಪುಟ ೮

ಪರ್ಯಾಯ ವ್ಯವಸ್ಥೆ

- ಎಂಎಸ್‌ಐಎಲ್ ಮೂಲಕ ವಿದೇಶದಿಂದ ಮರಳು ಆಮದು
- ೫೦ ಮತ್ತು ೧೦೦ ಕೆಜಿ ಚೀಲದಲ್ಲಿ ಕಡಿಮೆ ಬೆಲೆಗೆ ಮರಳು ಮಾರಾಟ
- ಗಣಿ ಇಲಾಖೆ ಪರವಾನಗಿ ಪಡೆದ ಖಾಸಗಿ ಸಂಸ್ಥೆಗಳಿಗೂ ಮರಳು ಆಮದಿಗೆ ಅವಕಾಶ

ನವ ಮೈಸೂರು ನಿರ್ಮಾಣವೇ ಗುರಿ

ಸರಗೂರು, ನಂಜನಗೂಡು, ತಿ.ನರಸೀಪುರದಲ್ಲಿ ಒಂದೇ ದಿನ ಮುಖ್ಯಮಂತ್ರಿಗಳಿಂದ ಪ್ರಗತಿ ಪರ್ವ

ಎಚ್.ಡಿ.ಕೋಟೆ,ಜ.೧೧– ತವರು ಜಿಲ್ಲೆಯ ಮೇಲಿನ ಅಪಾರ ಪ್ರೀತಿಯ ಕಾರಣವಾಗಿ 'ನವ ಮೈಸೂರು ನಿರ್ಮಾಣ'ದ ಗುರಿ ಇಟ್ಟುಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಗುರುವಾರ ಒಂದೇ ದಿನ ಸರಗೂರು, ನಂಜನಗೂಡು ಮತ್ತು ತಿ.ನರಸೀಪುರದಲ್ಲಿ ಹತ್ತಾರು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರಲ್ಲದೆ, ಯೋಕಾರ್ಪಣೆ ಕಾರ್ಯಗಳನ್ನೂ ಕೈಗೊಂಡರು.

ಗುರುವಾರ ಬೆಳಿಗ್ಗೆ ಚಾಮರಾಜನಗರ ಜಿಲ್ಲೆ ಮಲೆ ಮಹದೇಶ್ವರ ಬೆಟ್ಟದಿಂದ ಹೊರಟ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಜೆವರೆಗೂ ಮೈಸೂರು ಜಿಲ್ಲೆಯ ಮೂರೂ ಪಟ್ಟಣಗಳ ನಡುವೆ ವಿರಾಮಕ್ಕೂ ಅವಕಾಶ ವಿಲ್ಲದಂತೆ ಸಂಚರಿಸಿ, ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಬಿಡುವಿಲ್ಲದ ಚಟುವಟಿಕೆ: ಮೊದಲಿಗೆ ಬೆಳಿಗ್ಗೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಸರಗೂರಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ, ಸಮುದಾಯ ಭವನ ಉದ್ಘಾಟನೆ ನೆರವೇರಿಸಿದರು. ಮಧ್ಯಾಹ್ನ ನಂಜನ ಗೂಡಿನಲ್ಲಿ, ಸಂಜೆ ತಿ.ನರಸೀಪುರದಲ್ಲಿ ನೂತನ ಬಸ್ ನಿಲ್ದಾಣಗಳನ್ನು ಲೋಕಾರ್ಪಣೆಗೊಳಿಸಿದರು. ಎರಡೂ ತಾಲ್ಲೂಕುಗಳಲ್ಲಿ ಹತ್ತಾರು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಸರಗೂರು ಸಮಗ್ರ ಅಭಿವೃದ್ಧಿ: ನೂತನವಾಗಿ ಅಸ್ತಿತ್ವಕ್ಕೆ ಬರಲಿರುವ ಸರಗೂರು ತಾಲ್ಲೂಕು ಸೇರಿದಂತೆ ಅವಿಭಜಿತ ಎಚ್.ಡಿ. ಕೋಟೆ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ನೆರವಿನ ಮಹಾಪೂರವನ್ನೇ ಹರಿಸಿದ್ದು, ಒಟ್ಟು ೧೧೩ ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಗಡಿ ಭಾಗದ ಹಿಂದುಳಿದ ತಾಲ್ಲೂಕು ಎಂದೇ ಗುರುತಿಸಿಕೊಂಡಿರುವ ಎಚ್.ಡಿ.ಕೋಟೆ ತಾಲ್ಲೂಕಿನಿಂದ ಬೇರ್ಪಡುತ್ತಿರುವ ಸರಗೂರು ಪಟ್ಟಣದ ಕಾವೇರಿ ನೀರಾವರಿ ನಿಗಮದ ಹೊರ ಆವರಣದಲ್ಲಿ ಗುರುವಾರ ೨೯ ಯೋಜನೆ ಗಳನ್ನು ಉದ್ಘಾಟಿಸಿ ೮೯ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಸ ತಾಲ್ಲೂಕಿಗೆ ನಾಂದಿ ಹಾಡಿದರು.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ನಮ್ಮ ಗ್ರಾಮ, ನಮ್ಮ ರಸ್ತೆ, ೩ ಸಮುದಾಯ ಭವನಗಳನ್ನು ಉದ್ಘಾಟಿಸಿದ ಅವರು, ಸರ್ಕಾರಿ ಪ್ರೌಢಶಾಲೆ ಕಟ್ಟಡ, ರೈತ ಸಂಪರ್ಕ ಕೇಂದ್ರ, ೩ ಸಮುದಾಯ ಭವನಗಳು, ೮ತ ನೀರಾವರಿ ಯೋಜನೆ, ರಸ್ತೆ, ಸೇತುವೆಗಳು, ಪಟ್ಟಣದ ಒಳಚರಂಡಿ ವ್ಯವಸ್ಥೆ, ಕಾಲೇಜು ಕಟ್ಟಡ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿದರು.

ನಂತರ ಬಹಿರಂಗ ವೇದಿಕೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಚ್.ಡಿ.ಕೋಟೆ ತಾಲ್ಲೂಕಿನ ಅಭಿವೃದ್ಧಿಗಾಗಿ ೧೪೦೦ ಕೋಟಿ ರೂ.ಗಳಷ್ಟು ಅನುದಾನ ನೀಡಲಾಗಿದೆ. ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಹಿಂದಿನ ಯಾವುದೇ ಸರ್ಕಾರ ಇಷ್ಟೊಂದು ದೊಡ್ಡ ಮೊತ್ತದ ಅನುದಾನವನ್ನು ನೀಡಿರಲಿಲ್ಲ ಎಂದರು.

ಲೋಕೋಪಯೋಗಿ ಇಲಾಖೆಯೊಂದರಿಂದಲೇ ೨೦೦ ಕೋಟಿ ರೂ. ಅನುದಾನ ನೀಡಿ ರಸ್ತೆ, ಸೇತುವೆಗಳನ್ನು ನಿರ್ಮಿಸಲಾಗಿದೆ. ನೀರಾವರಿಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಹೇಳಿದರು.

ಪುಟ ೮

ನಂಜನಗೂಡು ಪಟ್ಟಣದಲ್ಲಿ ಗುರುವಾರ ಆಯೋಜಿಸಿದ್ದ ತಾಲ್ಲೂಕಿನ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಸಚಿವರಾದ ಡಾ.ಸೀತಾ ಮಹದೇವಪ್ರಸಾದ್, ಸಂಸದ ಆರ್.ಧ್ರುವ ನಾರಾಯಣ, ಶಾಸಕರಾದ ವಾಸು, ಈಶ್ವರ ಖಂಡ್ರೆ ಮತ್ತು ಸತೀಶ್ ಜಾರಕಿಹೊಳಿ, ವಿಧಾನಪರಿಷತ್ ಸದಸ್ಯ ಆರ್.ಧರ್ಮಸೇನ, ಮೈಸೂರು ಜಿಪಂ ಅಧ್ಯಕ್ಷೆ ನಂಜಮ್ಮ ಸುಲ್ತಾನ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಮಲ್ಲಗೆ ವೀರೇಶ್, ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮ ಅಧ್ಯಕ್ಷ ಎಸ್.ನಂದಕುಮಾರ್, ಕಾಡಾ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಡಾ.ಯತೀಂದ್ರ ಸಿದ್ದರಾಮಯ್ಯ, ಸುನಿಲ್ ಬೋಸ್, ಜಿ.ವಿ.ಸೀತಾರಾಂ, ಜಿಪಂ. ಸದಸ್ಯರಾದ ಎಸ್.ಶ್ರೀಕೃಷ್ಣ, ವೆಂಕಟಸ್ವಾಮಿ, ಎಂ.ಪಿ.ನಾಗರಾಜು, ನಂದಿನಿ ಹಂದ್ರಾಶೇಖರ್, ಮಹಾ ಅಮರನಾಥ್, ಜಿ.ಸಿ.ಪರಮಹಂಸ ಶ್ಯಾಮಸುಂದರ್, ಮಹದೇವಮ್ಮ ಚಕ್ಕಣ್ಣ ಮತ್ತಿತರರಿದ್ದರು.

'ಹಿಂದುತ್ವದ ಉಗ್ರವಾದಿಗಳು ಎಂದಿದ್ದೆ'

ಮೈಸೂರು: ಬಿಜೆಪಿ, ಆರ್‌ಎಸ್‌ಎಸ್, ಸಂಘ ಪರಿವಾರದವರನ್ನು ನಾನು ನೇರವಾಗಿ ಉಗ್ರಗಾಮಿಗಳು ಎಂದಿಲ್ಲ. ಹಿಂದುತ್ವದ ಉಗ್ರವಾದಿಗಳು ಎಂದು ಹೇಳಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಗುರುವಾರ ಮಧ್ಯಾಹ್ನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ಸಾವಿನ ಮನೆಯಲ್ಲಿ ರಾಜಕಾರಣ ಮಾಡುವವರನ್ನು ಮತ್ತೇನೆಂದು ಕರೆಯಬೇಕು. ನಾನು ನಿನ್ನೆ ಹೇಳಿದ್ದು ಸರಿಯಾಗಿಯೇ ಇದೆ ಎಂದು ಸಮರ್ಥಿಸಿಕೊಂಡರು.

ಪುಟ ೮

ಮಹಾದಾಯಿ: ಫೆಬ್ರವರಿಗೆ ಸರ್ವಪಕ್ಷ ಸಭೆ

ಮೈಸೂರು: ಮಹಾದಾಯಿ ವಿವಾದ ಬಗೆಹರಿಸಲು ಜನವರಿ ಅಂತ್ಯ ಅಥವಾ ಫೆಬ್ರವರಿ ಮೊದಲ ವಾರ ಸರ್ವಪಕ್ಷ ಸಭೆ ಕರೆಯ ಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ರೈತ ಸೇನಾ ಕರ್ನಾಟಕ ಸಂಘಟ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನೀರಿನ ವಿಚಾರದಲ್ಲಿ ಯಾವ ಪಕ್ಷವೂ ರಾಜಕೀಯ ಮಾಡಬಾರದು. ಸಭೆಯಲ್ಲಿ ರಾಜ್ಯದ ಪರವಾಗಿ ಚರ್ಚೆ ನಡೆಸಿ ಸಮಸ್ಯೆ ಬಗೆಹರಿಸಲು ಸಲಹೆಗಳನ್ನು ನೀಡಬೇಕು ಎಂದರು.

ನಂತರ ಪ್ರಧಾನಿ ಬಳಿಗೆ ಸರ್ವಪಕ್ಷ ನಿಯೋಗ ಕರೆದುಕೊಂಡು ಹೋಗಲಾಗುವುದು ಎಂದರು.

ವಿವರ ಪುಟ ೧೦

ನಾಳೆಯಿಂದ ಬಹುಮುಖಿ ಸುತ್ತೂರು ಜಾತ್ರೆ

ಮೈಸೂರು,ಜ.೧೧– ಕೃಷಿಕರು, ವಿದ್ಯಾರ್ಥಿಗಳು, ಯುವಜನರು, ಎಲ್ಲರನ್ನೂ ಒಳಗೊಳ್ಳುವ, ನಾಡಿನ ಶ್ರೀಮಂತ ಜನಪದ ಸಂಸ್ಕೃತಿ ಪ್ರತಿಬಿಂಬಿಸುವ, ಕುಸ್ತಿ ಪಂದ್ಯಾವಳಿ ಮತ್ತಿತರ ದೇಸಿ ಆಟ, ಪ್ರದರ್ಶನಗಳ ಮೂಲಕ ನಾಡಿನಾದ್ಯಂತದ ಜನರ ಗಮನ ಸೆಳೆಯುತ್ತಿರುವ ಸುತ್ತೂರು ಜಾತ್ರೆಗೆ ಶನಿವಾರ ಚಾಲನೆ ದೊರೆಯಲಿದೆ.

ಕೃಷಿ, ಶೈಕ್ಷಣಿಕ, ಜಾನಪದ ಸಂಸ್ಕೃತಿ ಅನಾವರಣ; ದೇಸಿ ಆಟಗಳ ಸಂಭ್ರಮ

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಜ.೧೩ರಿಂದ ೧೮ರವರೆಗೆ (೬ ದಿನ) ಸುತ್ತೂರಿನಲ್ಲಿ ನಡೆಯಲಿದ್ದು, ರಾಜ್ಯದ ವಿವಿಧೆಡೆಯಿಂದ ಆಗಮಿಸುವ ಲಕ್ಷಾಂತರ ಜನರು ಜಾತ್ರೆಯನ್ನು ಕಣ್ತುಂಬಿಕೊಳ್ಳಲಿದ್ದಾರೆ.

ಪುಟ ೧೧

ಮೈಸೂರು ಅಶ್ವಾರೋಹಿ ದಳ ಪೊಲೀಸರು ರಸ್ತೆ ಅವಘಡದಲ್ಲಿ ಆಶ್ಚರ್ಯಕರವಾಗಿ ಪಾರು ಪುಟ ೧೧

ಧೂಮಪಾನ: ರಾಜ್ಯದಲ್ಲಿ ನಿತ್ಯ ೨೦ ಸಾವು! ಸಮೀಕ್ಷಾ ವರದಿ ಪ್ರಕಟ ಪುಟ ೭